**ಪಾಠ–13** **ಸೆಪ್ಟೆಂಬರ್ 21–27**

# ಸೇವಕರ ಒಂದು ಸಮುದಾಯ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : 2 ಕೊರಿಂಥ 2:14–16; ವಿ.ಕಾಂಡ 32:1–14 ಮತ್ತು 1 ಪೇತ್ರ 2:12; ಫಿಲಿ 2:15; ಎಫೆ 2:19; ಇಬ್ರಿ 10:23–25.

**ಸ್ಮರಣವಾಕ್ಯ : ನಮ್ಮ ನಿರೀಕ್ಷೆಯನ್ನು ಕುರಿತು ನಾವು ಮಾಡಿದ ಪ್ರತಿಜ್ಞೆಯನ್ನು ನಿಶ್ಚಂಚಲವಾಗಿ ಪರಿಗ್ರಹಿಸೋಣ, ವಾಗ್ದಾನ ಮಾಡಿದಾತನು. ನಂಬಿಗಸ್ತನು ನಾವು ಪರಸ್ಪರ ಹಿತಚಿಂತಕರಾಗಿದ್ದು ಪ್ರೀತಿಸುತ್ತಿರಬೇಕೆಂತಲೂ ಸತ್ಕಾರ್ಯಮಾಡಬೇಕೆಂತಲೂ ಒಬ್ಬರನ್ನೊಬ್ಬರು ಪ್ರೇರೇಪಿಸೋಣ (ಇಬ್ರಿ 10:23,24).**

ಕ್ರೈಸ್ತಧರ್ಮಕಾರ್ಯವನ್ನು ಪೂರ್ಣ ಮಾಡಬೇಕೆಂದು ಬಯಸುವಾಗ ಸಭೆಯು ಒಂದು ಸುಸಂಘಟಿತ ವಿಶ್ವಾಸಿಗಳ ಸಮುದಾಯವಾಗಿರಲಾಗಿ ಅದರ ಸಾಮರ್ಥ್ಯವನ್ನು ಕಡಿಮೆಯಾಗಿ (ಅಲ್ಪವಾಗಿ) ಭಾವಿಸಬಾರದು. ನಾವು ಅನ್ಯಾಯ ಮತ್ತು ಬಡತನಗಳಲ್ಲಿ ವ್ಯವಹರಿಸುವಾಗ ಎಂತಹ ಸವಾಲುಗಳನ್ನು ಎದುರಿಸುತ್ತೇವೆ ಎಂಬುದನ್ನು ಈಗಾಗಲೇ ನೋಡಿದ್ದೇವೆ. ನಂಬಿಕೆಯ ಸಮುದಾಯದಲ್ಲಿ ನಮ್ಮ ವಿಶ್ವಾಸಿಗಳ ಜೊತೆ ಕೆಲಸ ಮಾಡುವಾಗ ನಮ್ಮ ಸುತ್ತ ಇರುವವರಿಗೆ ಆಶೀರ್ವಾದವಾಗಿರುತ್ತೇವೆ.

ನಾವು ಸಭೆಯಾಗಿ ಸೇರುವಾಗ ದೇವರು ಸಭೆಯನ್ನು ಲೋಕಕ್ಕೆ ಸೇವೆ ಮಾಡಲು ಅಸ್ತಿತ್ವದಲ್ಲಿಟ್ಟಿದ್ದಾನೆ ಎಂಬುದನ್ನು ಮರೆಯಬಾರದು. ನಾವು ಸಭೆಯಾಗಿ ನಮ್ಮ ಸುತ್ತವಿರುವ ದುಷ್ಟತನವನ್ನು ಮತ್ತು ಬಡತನವನ್ನು ಕಡೆಗಣಿಸಬಾರದು. ನಾವು ನಮಗೆ ಕೊಟ್ಟಿರುವ ಆದೇಶದಂತೆ ಸುವಾರ್ತೆಯನ್ನು ಸಾರುವುದರೊಟ್ಟಿಗೆ ಶೋಷಿತರನ್ನು, ಹಸಿದವರನ್ನು, ಬೆತ್ತಲೆಯಾದವರನ್ನು ಮತ್ತು ಅಸಹಾಯಕರನ್ನು, ಸಹ ಪಾರಂಬರಿಸಬೇಕು. ನಾವು (ಸಭೆಯು) ಒಂದು ಸಂಘಟನೆ ಮತ್ತು

ಸಮುದಾಯವಾಗಿ ಸೇರಿ ಕ್ರಿಸ್ತನ ದೇಹವಾಗಿರುತ್ತೇವೆ (1 ಕೊರಿಂಥ 12:12–20). ಹೀಗಿರಲಾಗಿ ಇಂದು ನಾವು ಸಮುದಾಯವಾಗಿ ಯೇಸುವಿನ ಮಾರ್ಗದಲ್ಲಿ ನಡೆಯಬೇಕು. ಯೇಸುವಿನ ಕರಗಳಂತೆ, ಕಾಲುಗಳಂತೆ ಮತ್ತು ಹೃದಯದಂತೆ ನಾವಿದ್ದು ಲೋಕದ ಸೇವೆಯನ್ನು ಮಾಡುವವರಾಗಿರಬೇಕು. ಈ ವಾರದ ಪಾಠವನ್ನು ಸೆಪ್ಟೆಂಬರ್ 28ರ ಸಬ್ಬತ್ತಿಗೆ ಸಿದ್ಧಪಡಿಸಿರಿ.

**ಭಾನುವಾರ** **ಸೆಪ್ಟೆಂಬರ್ 22**

## ಬದಲಾವಣೆಯ ಕಾರ್ಯಕರ್ತರು

ಅಪೋಸ್ತಲರ ಕೃತ್ಯಗಳು ಪುಸ್ತಕದಲ್ಲಿ ಮೊದಲ ಕೆಲವು ಅಧ್ಯಾಯಗಳಲ್ಲಿ ಆದಿಕ್ರೈಸ್ತರು ಒಂದು ಭಿನ್ನವಾದ ಸಮುದಾಯವನ್ನು ಹೇಗೆ ಸ್ಥಾಪಿಸಿದರು ಎಂಬುದನ್ನು ನೋಡುತ್ತೇವೆ. ಈ ಸಮುದಾಯವು ಕೊರತೆಯಲ್ಲಿದ್ದವರಿಗೆ ಸಹಾಯ ಮಾಡುತ್ತದೆ ಮತ್ತು ಇತರರನ್ನು ಸಹಾಯ ಹೊಂದಲು ಆಹ್ವಾನಿಸಿದ್ದರಿಂದ ವಿಶ್ವಾಸಿಗಳ ಸಂಖ್ಯೆಯು ಬೆಳೆಯುತ್ತಾ ಹೋಯಿತು.

ಕ್ರಿಸ್ತನು ಸಭೆಯನ್ನು ಲೋಕಕ್ಕೆ ಬೆಳಕು, ಉಪ್ಪು ಎಂಬುದಾಗಿ ಹೋಲಿಸಿದನು ಹಾಗೆಯೇ ಪೌಲನು ಸಹ ಅನೇಕ ರೂಪಕಗಳನ್ನು ಬಳಸಿದ್ದಾನೆ. ದೇವರ ಜನರನ್ನು ಯಜ್ಞಕ್ಕೆ ಹೋಲಿಸಿದ್ದಾನೆ (ರೋಮ 12:1), ಕ್ರಿಸ್ತನ ದೇಹವೆಂದು (1 ಕೊರಿಂಥ 12:20). ರಾಯಭಾರಿಗಳು (2 ಕೊರಿಂಥ 5:18–20), ಸುವಾಸನೆ (2 ಕೊರಿಂಥ 2:14–16).

ಈ ಎಲ್ಲಾ ರೂಪಕಗಳು ದೇವರ ರಾಜ್ಯದ ಪ್ರತಿನಿಧಿಗಳ ಬಗ್ಗೆ ಅಥವಾ ಕಾರ್ಯಕರ್ತರ ಪಾತ್ರಗಳ ಬಗ್ಗೆ ಮಹಾಹೋರಾಟದಿಂದ ವಿನಾಶವಾದ ಲೋಕದ ನಡುವೆ ಹೇಳುತ್ತವೆ. ಈ ಪ್ರತಿನಿಧಿಗಳಿಂದ ಮೇಲೆ ವರ್ಣಿತರಾಗಿರುವ ಪ್ರತಿಯೊಂದನ್ನೂ ಪುನರ್ ಅವಲೋಕಿಸಿರಿ.

ನೀವು ದೇವರನ್ನು ಆತನ ಮಾರ್ಗಗಳನ್ನು ಸಮುದಾಯದಲ್ಲಿ ಯಾವ ರೀತಿಯಾಗಿ ಪ್ರತಿನಿಧಿಸಲು ಬಯಸುತ್ತೀರಿ ಎಂಬುದನ್ನು ಯಾವುದು ಚೆನ್ನಾಗಿ ವರ್ಣಿಸುತ್ತದೆ?

ಇಲ್ಲಿ ವರ್ಣಿತವಾಗಿರುವ ಪ್ರತಿಯೊಂದು ಚಿತ್ರಕ್ಕೆ ಸಂಬಂಧಪಟ್ಟ ಕೆಲಸವಿದೆ. ದೇವರಿಗೆ ಅಂಗೀಕಾರವಾಗುವ ಸಾಧನವಾಗಿಯಲ್ಲ. ಆದರೆ ದೇವರ ಪ್ರೀತಿಗೆ ಮತ್ತು ಕೃಪೆಗೆ ಪ್ರತಿಕ್ರಿಯೆ ನೀಡುವವರಾಗಿ ಈಗಾಗಲೇ ಕ್ರಿಸ್ತನ ಯಜ್ಞದಿಂದ ದೇವರಿಗೆ ಒಪ್ಪಿಸಲ್ಪಟ್ಟಿರುತ್ತಾರೆ.

ಅವರನ್ನು ಇನ್ನೂ ಹೆಚ್ಚಾದ ಆಳವಾದ ಮಟ್ಟದಲ್ಲಿ ಪರಿಗಣಿಸಬಹುದು. ಯಾಕೆಂದರೆ ದೇವರ ಪ್ರೀತಿ ಮತ್ತು ಕೃಪೆ ದೇವರ ರಾಜ್ಯವು ಯಾವುದನ್ನು ಕುರಿತಾಗಿದೆ ಎಂದು ತಿಳಿಸುತ್ತದೆ. ನಾವು ಆ ರೀತಿಯಲ್ಲಿ ಇತರರಿಗೆ ಪ್ರೀತಿ ಮತ್ತು ಕೃಪೆಯನ್ನು ತೋರಿಸುತ್ತಾ ಶಾಶ್ವತ ರಾಜ್ಯದಲ್ಲಿ ಪಾಲ್ಗೊಂಡವರಾಗಿ ಜೀವಿಸಬಹುದು.

ಅಂತರರಾಷ್ಟ್ರೀಯ ಕಾನೂನಿನ ಪ್ರಕಾರ ರಾಷ್ಟ್ರದ ರಾಯಭಾರವು ತನ್ನ ನೆಲದಿಂದ ಬಹಳ ದೂರದಲ್ಲಿರುವ ದೇಶದಲ್ಲಿ ನೆಲೆಗೊಂಡಿದ್ದರೂ ತನ್ನ ದೇಶವನ್ನು ಪ್ರತಿನಿಧಿಸುತ್ತದೆ. ಅದೇ ರೀತಿ ದೇವರ ರಾಜ್ಯದ ರೀತಿನೀತಿಗಳನ್ನು ನಮ್ಮ ಜೀವಿತದಲ್ಲಿ ಈವಾಗ ಪ್ರದರ್ಶಿಸುವಾಗ ಶಾಶ್ವತವಾದ ಸತ್ಯದ ಕಿರುಚಿತ್ರವನ್ನು ಕೊಡುತ್ತವೆ. ಅಂತ್ಯದಲ್ಲಿ ಆಗುವ ಸೋಲಿನ ರುಚಿಯನ್ನು ನೀಡುತ್ತವೆ.

ಯೇಸುವಿನ ರಾಯಭಾರಿಗಳಂತೆ ಮತ್ತು ಆತನ ಪ್ರತಿನಿಧಿಗಳಂತೆ ನಾವು ಜೀವನ ನಿರ್ವಹಿಸುವಾಗ ಸಭೆಯಲ್ಲಿ ನಾವು ಸೇವೆ ನೀಡಬಯಸುವವರ ಜೀವನದಲ್ಲಿ ಮತ್ತು ನಮ್ಮ ಜೀವನದಲ್ಲಿ ಯೇಸುವಿನ ಪ್ರೀತಿಯನ್ನು ಮತ್ತು ನ್ಯಾಯದ ವಾಸ್ತವತೆಯನ್ನು ಅನುಭವಿಸಬಹುದು.

2 ಕೊರಿಂಥ 2:16ನ್ನು ಓದಿರಿ. ಎರಡು ವಾಸನೆಗಳ ನಡುವೆ ಯಾವ ವ್ಯತ್ಯಾಸವಿದೆ ಮತ್ತು ನಾವು ಯಾವ ವಾಸನೆಯಾಗಿದ್ದೇವೆ ಎಂದು ತಿಳಿಯಬಹುದು?

**ಸೋಮವಾರ** **ಸೆಪ್ಟೆಂಬರ್ 23**

## ಉಳಿದ ಒಬ್ಬ ಸೇವಕ

ಪ್ರಕಟಣೆ 12:17 ಸತ್ಯವೇದ ಪ್ರವಾದನೆಯಾಗಿ ಗುರುತಿಸಲ್ಪಟ್ಟು "ಉಳಿದ ಜನರ" ಅಧಿಕೃತ ವ್ಯಾಖ್ಯಾನವಾಗಿದೆ. ದೇವರ ಆಜ್ಞೆಗಳನ್ನೂ ಯೇಸುವಿನ ಮೇಲಿನ

ನಂಬಿಕೆಯನ್ನೂ ಕೈಕೊಂಡು ನಡೆಯುತ್ತಿರುವ ದೇವಜನರ ತಾಳ್ಮೆಯು ತೋರಿ ಬರುತ್ತದೆ (ಪ್ರಕ 14:12). ಸತ್ಯವೇದದಲ್ಲಿರುವ ಈ ಲಕ್ಷಣಗಳು ಭೂಮಿಯ ಚರಿತ್ರೆಯ ಕಡೇ ಹಂತದಲ್ಲಿರುವ ದೇವಜನರೆಂದು ಗುರುತು ಮಾಡುತ್ತದೆ. ಸತ್ಯವೇದದಲ್ಲಿ 'ಉಳಿದ ಜನರು' ಹೇಗೆ ಕೆಲಸ ಮಾಡುತ್ತಾರೆ, ನಿರ್ದಿಷ್ಟವಾಗಿ ಹೇಗೆ ಅವರು ಇತರರ ಸೇವೆ ಮಾಡುತ್ತಾರೆ ಎಂಬುದರ ಉದಾಹರಣೆಗಳು ತುಂಬಿವೆ. ಈ ವಿಷಯದಲ್ಲಿ ಮೋಶೆಯ ಉದಾಹರಣೆ ಭಯಪಡಿಸುತ್ತದೆ. ವಿ.ಕಾಂಡ 32:1–14ನ್ನು ಓದಿರಿ. ಇಲ್ಲಿರುವ ಮೋಶೆಗೂ ಮತ್ತು ಪ್ರಕಟಣೆ 12:17 ರಲ್ಲಿರುವ ಉಳಿದವರಿಗೂ ಯಾವ ಹೋಲಿಕೆ ಇದೆ? ಇಸ್ರಾಯೇಲ್ಯರ ಮೇಲಿನ ಕೋಪದಿಂದ ದೇವರು ಅವರನ್ನು ನಾಶಮಾಡಿ ಅಬ್ರಹಾಮನಿಗೆ ತಾನು ಮಾಡಿದ್ದ ದೊಡ್ಡ ಜನಾಂಗದ ವಾಗ್ದಾನವನ್ನು ಮೋಶೆಯ ಕುಟುಂಬಕ್ಕೆ ವರ್ಗಾಯಿಸಲು ನಿರ್ಧರಿಸುತ್ತಾನೆ (ವಿ.ಕಾಂಡ 32:10). ಆದರೆ ಮೋಶೆಗೆ ಇದು ಬೇಕಾಗಿರಲಿಲ್ಲ. ಆದರೆ ದಿಟ್ಟನಾಗಿ ದೇವರ ಸಂಗಡವಾದಿಸುತ್ತಾನೆ (ವಿ.ಕಾಂಡ 32:11–13).

ಮೋಶೆಯು ಇಸ್ರಾಯೇಲ್ಯರನ್ನು ಮುನ್ನಡೆಸಲು ಹೋರಾಡುತ್ತಾನೆ. ಅವರು ಆರಂಭದಿಂದಲೂ ಇವನ ಮೇಲೆ ದೂರು ಹೇಳುತ್ತಾರೆ. ಸಣ್ಣಪುಟ್ಟದಕ್ಕೂ ಜಗಳವಾಡುತ್ತಾರೆ ಅಂಥವರ ಪರವಾಗಿ ಮೋಶೆಯು ದೇವರಿಗೆ ಅವರನ್ನು ಕ್ಷಮಿಸಬೇಕೆಂದು ಕೇಳುತ್ತಾನೆ. ನೀನು ಅವರನ್ನು ಕ್ಷಮಿಸದೆ ಹೋದರೆ ನನ್ನ ಹೆಸರನ್ನೂ ಸಹ ನಿನ್ನ ಪುಸ್ತಕದಿಂದ ಅಳಿಸಿ ಬಿಡು ಎಂದು ಹೇಳುತ್ತಾನೆ (ವಿ.ಕಾಂಡ 32:32). ತನ್ನವರನ್ನು ಉಳಿಸಲು ನಿತ್ಯತ್ವವನ್ನೂ ತ್ಯಜಿಸಲು ಸಿದ್ಧವಾಗುತ್ತಾನೆ.

ಅರ್ಹರಲ್ಲದವರ ಪರವಾಗಿ ಸ್ವತ್ಯಾಗದ ಮಧ್ಯಸ್ತಿಕೆಗೆ ಎಂತಹ ಉದಾಹರಣೆಯಾಗಿದೆ. ಇಡೀ ರಕ್ಷಣೆಯ ಯೋಜನೆಗೆ ಎಂತಹ ಶಕ್ತಿಯುತ ಸಂಕೇತವಾಗಿದೆ!

"ಮೋಶೆಯು ಇಸ್ರಾಯೇಲ್ಯರ ಪರವಾಗಿ ಮಧ್ಯಸ್ಥನಾದಾಗ ಅವನ ಪುಕ್ಕಲತನವು ಅವರ ಮೇಲಿನ ಪ್ರೀತಿಯಲ್ಲಿ ಮತ್ತು ಆಳವಾದ ಆಸಕ್ತಿಯಲ್ಲಿ ಕಳೆದು ಹೋಯ್ತು

ಹಾಗಾಗಿ ದೇವರ ಕೃಪೆಯಲ್ಲಿ ಹೆಚ್ಚಾಗಿ ಕೆಲಸ ಮಾಡುವ ಸಾಧನವಾಗಿದ್ದನು. ಕರ್ತನು ಅವನ ಮೊರೆಗೆ ಕಿವಿಕೊಟ್ಟನು. ಪ್ರಾರ್ಥನೆಗೆ ಉತ್ತರವನ್ನು ಅನುಗ್ರಹಿಸಿದನು. ದೇವರು ಮೋಶೆಯ ನಂಬಿಗಸ್ತಿಕೆಯನ್ನು ತಪ್ಪೆಸುಗುವ, ಉಪಕಾರ ನೆನೆಸದವರ ಜನರ ಮೇಲೆ ಅವನಿಗಿದ್ದ ಪ್ರೀತಿಯನ್ನೂ ಪರೀಕ್ಷಿಸಿದನು. ಮೋಶೆಯು ಈ ಶೋಧನೆಯನ್ನು ಉದಾತ್ತವಾಗಿ ತಾಳಿಕೊಂಡನು. ಇಸ್ರಾಯೇಲ್ಯರ ಮೇಲಿದ್ದ ಅವನ ಆಸಕ್ತಿಯಲ್ಲಿ ಸ್ವಾರ್ಥದ ಉದ್ದೇಶವಿರಲಿಲ್ಲ. ಅವನಿಗೆ ತನ್ನ ಉನ್ನತಿಗಿಂತ ಇಸ್ರಾಯೇಲ್ಯರ ಉನ್ನತಿಯು ಪ್ರಿಯವಾಗಿತ್ತು. ಅನೇಕ ಜನಾಂಗಗಳಿಗೆ ಪಿತೃವಾಗುವುದಕ್ಕಿಂತಲೂ ಅವರ ಉನ್ನತಿಯೇ ಅವನಿಗೆ ಪ್ರಿಯವಾಗಿತ್ತು. ದೇವರು ಅವನ ನಂಬಿಕೆ, ಹೃದಯದ ಸರಳತೆ, ಪ್ರಾಮಾಣಿಕತೆಗಳನ್ನು ಮೆಚ್ಚಿದನು.

ನಂಬಿಗಸ್ತ ಕುರುಬನಾಗಿ ಇಸ್ರಾಯೇಲ್ಯರನ್ನು ವಾಗ್ದತ್ತ ದೇಶಕ್ಕೆ ನಡೆಸುವ ಜವಾಬ್ದಾರಿಯನ್ನು ಅವನಿಗೆ ಕೊಟ್ಟನು". ಎಲೆನ್ ಜಿ ವೈಟಮ್ಮನವರು ಬರೆದ "ಪೇಟ್ರಿಯಾರ್ಕ್ಸ್ ಅಂಡ್ ಪ್ರಫೆಟ್ಸ್" ಪುಸ್ತಕ ಪುಟ 139.

ಸಾಧ್ಯವಾದಷ್ಟರ ಮಟ್ಟಿಗೆ ತಪ್ಪು ಮಾಡುವವರೊಂದಿಗೆ ಹೇಗೆ ನಡೆದುಕೊಳ್ಳ ಬೇಕೆಂಬುದರ ಬಗ್ಗೆ ಇದು ಏನು ಹೇಳುತ್ತದೆ?

**ಮಂಗಳವಾರ** **ಸೆಪ್ಟೆಂಬರ್ 24**

## ಆತ್ಮಗಳನ್ನು ತಲುಪುವುದು

ಸಭೆಯ ಚರ್ಚೆಯು ಕೆಲವು ಸಲ ಯಾವ ಆಯ್ಕೆ ಮಾಡಬೇಕು. ಯಾವುದಕ್ಕೆ ಹೆಚ್ಚಿನ ಗಮನ ಕೊಡಬೇಕು ಸಾಮಾಜಿಕ ಅಥವಾ ಸುವಾರ್ತೆಯ ಕೆಲಸಕ್ಕೂ, ಪ್ರೀತಿ ಅಥವಾ ಸಾಕ್ಷಿ ನೀಡುವುದಕ್ಕೋ, ನ್ಯಾಯ ಅಥವಾ ಸುವಾರ್ತೆಗೋ ಎಂಬುದಾಗಿ ಆಲೋಚನೆ ಮಾಡಲು ನಿಂತುಬಿಡುತ್ತದೆ. ಆದರೆ ಈ ಪರಿಕಲ್ಪನೆಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಯೇಸುವಿನ ಸೇವೆಯನ್ನು ಪಾಲಿಸುವಾಗ ವ್ಯತ್ಯಾಸವು ಮುರಿದುಹೋಗುತ್ತದೆ. ಸುವಾರ್ತೆ ಸಾರುವುದು ಇತರರಿಗೆ ಸಹಾಯ ಮಾಡಲು ಕೆಲಸ ಮಾಡುವುದು ಎರಡಕ್ಕೂ ಹತ್ತಿರದ ಸಂಬಂಧವಿದೆ ಎಂಬುದನ್ನು ಮನಗಾಣುತ್ತೇವೆ. ಎಲೆನ್ ಜಿ ವೈಟಮ್ಮನವರ ಜನಪ್ರಿಯ ಹೇಳಿಕೆಯೊಂದು ಹೀಗೆ ಹೇಳುತ್ತದೆ.

ಕ್ರಿಸ್ತನ ವಿಧಾನವೇ ಜನರನ್ನು ತಲುಪುವುದರಲ್ಲಿ ನಿಜವಾದ ಯಶಸ್ಸನ್ನು ಕೊಡುತ್ತದೆ. ಜನರ ಒಳಿತನ್ನು ಬಯಸುವವನಾಗಿ ರಕ್ಷಕನು ಜನರೊಟ್ಟಿಗೆ ಬೆರೆತನು. ಆತನು ಅವರಿಗೆ ಸಹಾನುಭೂತಿ ತೋರಿಸಿದನು. ಅವರ ಅಗತ್ಯತೆಗಳನ್ನು ಪೂರೈಸಿದನು ಮತ್ತು ಅವರ ವಿಶ್ವಾಸವನ್ನು ಗೆದ್ದುಕೊಂಡನು. ನಂತರ ಅವರಿಗೆ ನನ್ನನ್ನು ಹಿಂಬಾಲಿಸಿರಿ ಎಂದು ಕರೆ ನೀಡಿದನು.

ಬಡವರಿಗೆ ಬಿಡುಗಡೆಯಾಗ ಬೇಕು ಅಸ್ವಸ್ಥರಿಗೆ ಗುಣವಾಗಬೇಕು. ದುಃಖಿತರಿಗೆ ತನ್ನವರನ್ನು ಕಳೆದುಕೊಂಡವರಿಗೆ ಆದರಣೆಬೇಕು. ಅಜ್ಞಾನಿಗಳಿಗೆ ಪ್ರಬೋಧನೆ–ಯಾಗಬೇಕು, ಅನುಭವವಿಲ್ಲದವರಿಗೆ ಸಲಹೆ ನೀಡಬೇಕು. ಅಳುವವರ ಸಂಗಡ ಅಳಬೇಕು. ಸಂತೋಷಿಸುವವರ ಸಂಗಡ ಸಂತೋಷಿಸಬೇಕು. ಎಲೆನ್ ಜಿ ವೈಟಮ್ಮನವರ ಮಿನಿಸ್ಟ್ರೀ ಆಫ್ ಹೀಲಿಂಗ್ ಪುಸ್ತಕ ಪುಟ 143.

ನಾವು ನೋಡಿದಂತೆ ದೇವರ ರಾಜ್ಯದ ಎರಡು ಕ್ರಿಯೆಗಳು ಒಟ್ಟಾಗಿ ಎಣೆದುಕೊಂಡಿವೆ. ನ್ಯಾಯ ಮತ್ತು ಸುವಾರ್ತೆ ಯೇಸುವಿನ ಸೇವೆಯಲ್ಲಿ ಮಾತ್ರವಲ್ಲ. ತನ್ನ ಶಿಷ್ಯರಿಗೆ ಕೊಟ್ಟ ಪ್ರಥಮ ಆದೇಶದ ಜೊತೆಯು ಎಣೆದುಕೊಂಡಿವೆ ಪರಲೋಕ ರಾಜ್ಯವು ಸಮೀಪವಾಯಿತೆಂದು ಸಾರಿ ಹೇಳುತ್ತಾ ಹೋಗಿರಿ, ರೋಗಿಗಳನ್ನು ಸ್ವಸ್ಥ ಮಾಡಿರಿ, ದೆವ್ವಗಳನ್ನು ಬಿಡಿಸಿರಿ, ಕುಷ್ಠ ಹತ್ತಿದವರನ್ನು ಶುದ್ಧ ಮಾಡಿರಿ ಉಚಿತವಾಗಿ ಹೊಂದಿದ್ದೀರಿ ಉಚಿತವಾಗಿ ಕೊಡಿರಿ (ಮತ್ತಾಯ 10:7–8). ಸಂಕ್ಷಿಪ್ತವಾಗಿ ಹೇಳಬೇಕೆಂದರೆ ನಮ್ಮ ಸಂದೇಶದಿಂದ ಇತರರನ್ನು ತಲುಪುವ ವಿಧಾನಗಳಲ್ಲಿ ಉತ್ತಮವಾದುದು ಯಾವುದೆಂದರೆ ಅವರಿಗೆ ಬೇಕಾಗಿರುವ ಸಹಾಯವನ್ನು ಮಾಡುವುದು.

1 ಪೇತ್ರ 2:12 ಮತ್ತು ಫಿಲಿಪ್ಪಿ 2:15ನ್ನು ಓದಿರಿ. ದೇವಜನರು ಮಾಡುವ ಒಳ್ಳೆಯ ಕೆಲಸಗಳ ಸಾಕ್ಷಿ ಬಗ್ಗೆ ಪೇತ್ರ ಮತ್ತು ಪೌಲರು ಏನು ಹೇಳುತ್ತಾರೆ?

ದೇವರ ಸುವಾರ್ತೆಯ ವಿಶಾಲವಾದ ತಿಳುವಳಿಕೆ ಏನೆಂದರೆ ಜನರ ಮೇಲೆ ನಮಗೆ ಆಸಕ್ತಿ ಇಲ್ಲದೆ ಹೋದರೆ ಸುವಾರ್ತೆಯು ಯಾವ ಅರ್ಥವನ್ನೂ ಕೊಡಲಾರದು. 1 ಯೋಹಾನ 3:16–18ರಲ್ಲಿರುವ ವಾಕ್ಯಗಳ ಹಾಗೆ ಮತ್ತು ಯಾಕೋಬ 2:16 ಸುವಾರ್ತೆಯನ್ನು ತಮ್ಮ ಜೀವಿತದಲ್ಲಿ ಜೀವಿಸದೆ ಇತರರಿಗೆ ಹೇಳಿಕೊಡುವುದರ ವೈರುಧ್ಯವನ್ನು ಎತ್ತಿ ಹೇಳುತ್ತಾ ಸುವಾರ್ತೆಯು ಉತ್ತಮ

ರೀತಿಯಾಗಿ ನಿರೀಕ್ಷೆಯ ವಾರ್ತೆಯನ್ನು ತರುವುದು ಪಾರು ಮಾಡುವುದು. ಪಶ್ಚಾತ್ತಾಪ, ಪರಿವರ್ತನೆ ಮತ್ತು ದೇವರ ಆಲಿಂಗನ ಪ್ರೀತಿ ಇವೆಲ್ಲವೂ ನ್ಯಾಯವನ್ನು ತಿಳಿಯಪಡಿಸುತ್ತವೆ. ಸುವಾರ್ತೆ ಹಾಗು ನ್ಯಾಯಾಸಕ್ತಿ ಎರಡೂ ಕಳೆದು ಹೋದವರಿಗೆ ಮುರಿದುಹೋದವರಿಗೆ ಮತ್ತು ನೋವುಂಡ ಜನರಿಗೆ ದೇವರ ಪ್ರೀತಿಯನ್ನು ಗುರುತು ಹಚ್ಚುವಾಗ ಚಿಮ್ಮುತ್ತದೆ. ನಮ್ಮ ಬಾಳಿನಲ್ಲಿ ದೇವರ ಪ್ರಭಾವದಿಂದಲೂ ನಮ್ಮ ಹೃದಯದಲ್ಲಿ ಪ್ರೀತಿ ಬೆಳೆಯುತ್ತದೆ. ನಾವು ಒಂದು ಅಥವಾ ಮತ್ತೊಂದು ಕಾರ್ಯವನ್ನು ಆಯ್ಕೆ ಮಾಡುವುದಿಲ್ಲ. ಅದಕ್ಕೆ ಬದಲಾಗಿ ನಾವು ಜನರೊಟ್ಟಿಗೆ ಕೆಲಸ ಮಾಡುವಾಗ, ದೇವರು ಕೊಟ್ಟಿರುವ ಸಂಪನ್ಮೂಲಗಳಿಂದ ಅವರ ಕೊರತೆಗಳನ್ನು ತುಂಬುವಾಗ ದೇವರೊಟ್ಟಿಗೆ ಕೆಲಸ ಮಾಡಿದಂತಾಗುತ್ತದೆ.

ನಾವು ಇತರರಿಗೆ ಒಳ್ಳೆಯ ಕೆಲಸಗಳನ್ನು ಮಾಡುವಾಗ ರಕ್ಷಣೆಯ ವಾರ್ತೆಯ ಬೋಧನೆಯನ್ನು ಹೇಗೆ ಖಾತ್ರಿ ಮಾಡಿಕೊಳ್ಳಬಹುದು?

**ಬುಧವಾರ** **ಸೆಪ್ಟೆಂಬರ್ 25**

## ಸಭೆಯೊಳಗಿರುವ ಕೃಪೆ

ಯೋಬನ ಪುಸ್ತಕದ ಆರಂಭದಲ್ಲಿ ದೇವರ ಯೋಬನನ್ನು ಮತ್ತು ಯೋಬನ ನಂಬಿಗಸ್ತಿಕೆಯ ಜೀವನವನ್ನು ಲಕ್ಷ್ಯಕ್ಕೆ ತರುತ್ತಾನೆ. ಯೋಬನ ಜೀವಿತವು ದೇವರ ಮಾರ್ಗಗಳು ಹೇಗೆ ಒಳ್ಳೆಯದಾಗಿವೆ ಮತ್ತು ದೇವರು ಬಿದ್ದುಹೋದ ಮಾನವತೆಯ ಸಂಗಡ ಹೇಗೆ ವರ್ತಿಸುತ್ತಾನೆಂಬುದಕ್ಕೆ ನಿದರ್ಶನ ರೂಪವಾಗಿದೆ (ಯೋಬ 1:8). ಜನರು ತಮ್ಮ ಜೀವಿತವನ್ನು ಜೀವಿಸುವಂತೆ ದೇವರು ತನ್ನ ಖ್ಯಾತಿಯನ್ನು ಮುಂದುವರೆಸಿಕೊಂಡು ಹೋಗುವುದು ಅಸಾಧಾರಣವಾಗಿದೆ. ಆದರೆ ಪೌಲನು ನಂತರ ಈ ನಂಬಿಕೆಯನ್ನು ವಿಸ್ತರಿಸಿ ಸಭೆಯ ಸಮುದಾಯಕ್ಕೆ ಸೇರಿಸುತ್ತಾನೆ.

ದೇವರು ನಮ್ಮ ಕರ್ತನಾದ ಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾ ವಿಧವಾದ ಜ್ಞಾನವು ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಿಗಳಿಗೂ ಈ ಕ್ರೈಸ್ತಸಭೆಯ ಮೂಲಕ ಗೊತ್ತಾಗ ಬೇಕೆಂಬುದನ್ನು ಉದ್ದೇಸಿಸಿದ್ದನು (ಎಫೆಸ 3:10).

ಎಫೆಸ 2:19ನ್ನು ಓದಿರಿ ಸಭಾಸಮುದಾಯವನ್ನು ದೇವರ ಮನೆಯೆಂದು ವರ್ಣನೆ ಮಾಡುವ ಆಲೋಚನೆಯಲ್ಲಿ ಏನು ಅಡಕವಾಗಿದೆ ಎಂದು ಭಾವಿಸುತ್ತೀರಿ?

ಯಾವುದೇ ಸಮುದಾಯವು ಅಥವಾ ಸಂಸ್ಥೆಯು ತನ್ನ ಸದಸ್ಯರನ್ನು ಹೇಗೆ ಪರಿಗಣಿಸುತ್ತದೆ ಎಂಬುದು ಆ ಸಮೂಹಕ್ಕೆ ಆಧಾರವಾದ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ.

ದೇವರ ಮನೆಯಾಗಿ ಯೇಸುವಿನ ದೇಹ ಮತ್ತು ಪರಿಶುದ್ಧಾತ್ಮನ ಸಮುದಾಯವಾಗಿರುವ ಸಭೆಗೆ ಜೀವಿಸಲು ಉನ್ನತವಾದ ಕರೆಯಿದೆ. ದೇವರು ಸಮಾಧಾನಕ್ಕೆ ಕಾರಣನೇ ಹೊರತು ಗಲಿಬಿಲಿಗೆ ಕಾರಣನಲ್ಲ (1 ಕೊರಿಂಥ 14:33).

ನ್ಯಾಯ, ಕೃಪೆ ಮತ್ತು ಪ್ರೀತಿಯು ದೇವರ ನ್ಯಾಯದಲ್ಲಿ ದೇವರ ಪ್ರೀತಿಯಲ್ಲಿ ಮತ್ತು ದೇವರ ಕೃಪೆಯಲ್ಲಿ ತೋರಿಸಿರುವಂತೆ ಸಭೆಯಲ್ಲಿ ನಡೆಯುವುದನ್ನೆಲ್ಲಾ ನಿಯಂತ್ರಿಸಬೇಕು. ಸ್ಥಳೀಯಸಭೆಯನ್ನು ಹಿಡಿದುಕೊಂಡು ಜಾಗತಿಕ ಸಭೆಯವರಿಗೂ ಈ ನೇಮಗಳು ಸಭೆಯ ನಾಯಕರುಗಳನ್ನು ತೀರ್ಮಾನ ತೆಗೆದುಕೊಳ್ಳುವಾಗ ಸಭೆ ಸಮುದಾಯವು ಕನಿಷ್ಠರಾದವರನ್ನು ಪರಾಂಬರಿಸುವಾಗ ಮುನ್ನಡಸಬೇಕು. ಸಭೆಯಲ್ಲಿ ಕಾಲದಿಂದ ಕಾಲಕ್ಕೆ ತಲೆದೋರುವ ವಿವಾದಗಳನ್ನು ಪರಿಹರಿಸುವುದಕ್ಕೂ ಸಹ ಈ ನೇಮಗಳು ಸರಿಯಾಗಿ ಮಾರ್ಗದರ್ಶನ ನೀಡಬೇಕು. ಸಭೆಯ ಒಳಗೆ ಸರಿಯಾಗಿ ನಡೆದುಕೊಳ್ಳದಿದ್ದರೆ ಸಭೆಯ ಹೊರಗೆ ಇತರರೊಂದಿಗೆ ನಡೆದುಕೊಳ್ಳಲು ಹೇಗೆ ಸಾಧ್ಯ?

ಸಭೆಯ ಸಂಸ್ಥೆಗೆ ಕೆಲಸಗಾರರನ್ನು, ನೇಮಿಸುವಾಗ ಬೇರೆ ಎಲ್ಲದಕ್ಕಿಂತ ಹೆಚ್ಚಿನ ಮೌಲ್ಯವನ್ನು ಕೊಟ್ಟು ಅನ್ಯಾಯದ ವಿರುದ್ಧ ನಿಲ್ಲು ಉದಾರ ಗುಣದ ದಣಿಯಾಗಿರಬೇಕು.

ಸಭೆಯು ಗಾಸಿಪಟ್ಟವರನ್ನು ಸಂರಕ್ಷಿಸಲು ಸದಸ್ಯರು ಏನು ಮಾಡಬೇಕೋ ಅದನ್ನು ಮಾಡಬಲ್ಲವರನ್ನೊಳಗೊಂಡ ಸುರಕ್ಷಿತ ಸ್ಥಳವಾಗಿರಬೇಕು. ಆದಿಸಭೆಯಲ್ಲಿ ನೋಡಿದಂತೆ ಸಭಾಸಮುದಾಯದ ಸದಸ್ಯರುಗಳು ವಿಶೇಷವಾಗಿ ಸಭೆಯ

ಕುಟುಂಬದಲ್ಲಿ ಕೊರತೆಯಲ್ಲಿ ಬಿದ್ದವರಿಗೆ ಒತ್ತಾಸೆ ನೀಡುವವರಾಗಿರಬೇಕು. ಯೇಸುಕ್ರಿಸ್ತನು ಇದನ್ನು ಆಜ್ಞೆಯನ್ನಾಗಿ ಕೊಟ್ಟನು. ವಿಶ್ವಾಸಿಗಳ ಸಮುದಾಯಾನ್ನು ಪರಿವರ್ತಿಸುವುದರ ಜೊತೆಗೆ ಅವರ ವಿಶ್ವಾಸ ಎಂಥದ್ದು ಎಂಬುದನ್ನು ಅರಿಯಲು ಸಭೆಯ ಕಡೆ ನೋಡುವ ಇತರರಿಗೆ ತೋರಿಸುವುದಕ್ಕಾಗಿ ಕೊಟ್ಟನು. "ನಾನು ನಿಮಗೆ ಬಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನೆಂದರೆ ನೀವು ಒಬ್ಬರಿಗೊಬ್ಬರು ಪ್ರೀತಿಸಬೇಕು ಎಂಬುದೇ. ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳಿದುಕೊಳ್ಳುವರು ಅಂದನು" (ಯೋಹಾನ 13:34, 35).

**ಗುರುವಾರ** **ಸೆಪ್ಟೆಂಬರ್ 26**

## ದೇವರ ಕೆಲಸಕ್ಕೆ ಪರಸ್ಪರ ಉತ್ತೇಜನ ನೀಡಿರಿ

ನಮ್ಮ ಧ್ಯೇಯೋದ್ದೇಶಗಳು ಎಷ್ಟೇ ಉತ್ತಮವಾಗಿದ್ದರೂ ನಾವು ದೇವರು ಮತ್ತು ಒಳ್ಳೆಯತನಗಳ ಪರವಾಗಿದ್ದೇವೆ ಎಂದು ನಂಬಿದರೂ ದೇವ ಕೆಲಸ ಮಾಡುವುದು ಕಷ್ಟಕರವಾದದ್ದೂ ಅಧೈರ್ಯ ಹುಟ್ಟಿಸುವಂತದ್ದೂ ಆಗಿರುತ್ತದೆ.

ಲೋಕದಲ್ಲಿರುವ ದುಃಖನೋವುಗಳು ನಿಜವಾದವುಗಳಾಗಿವೆ. ಈ ಒಂದು ಕಾರಣಕ್ಕಾಗಿ ನಮಗೆ ಸಭಾಸಮುದಾಯಬೇಕು. ಯೇಸುವು ಈ ತರವಾದ ಒತ್ತಾಸೆ ನೀಡುವ ಮಾದರಿ ಸಮುದಾಯವನ್ನು ತನ್ನ ಶಿಷ್ಯರಲ್ಲಿ ರೂಪಿಸಿದನು. ಆತನು ಬಹಳ ಅಪರೂಪಕ್ಕೆ ಜನರನ್ನು ಹೊರಕ್ಕೆ ಕಳುಹಿಸುತ್ತಿದ್ದನು. ಒಂದು ವೇಳೆ ಅವರು ಹೊರಗೆ ಹೋದರೂ ಹಿಂತಿರುಗಿ ಬಂದು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದರು. ಇದರಿಂದ ಅವರಿಗೆ ಉತ್ತೇಜನ ಮತ್ತು ಚೈತನ್ಯ ದೊರಕುತ್ತಿತ್ತು.

ಇಬ್ರಿಯ 10:23–25ನ್ನು ಓದಿರಿ. ಇಬ್ರಿಯ 10:25 ಬಹಳ ಜನಪ್ರಿಯವಾಗಿದ ವಚನವಾಗಿದ್ದು ಇದಕ್ಕೆ ಮೊದಲು ಬರುವ ಎರಡು ವಚನಗಳು ಜನಪ್ರಿಯ ವಚನಗಳು ಏನನ್ನು ನಮ್ಮ ಅರಿವೆಗೆ ಸೇರಿಸುತ್ತವೆ? ಪ್ರೀತಿ ಮತ್ತು ಸತ್ಕ್ರಿಯೆಗಳ ವಿಷಯದಲ್ಲಿ ಪರಸ್ಪರ ಒತ್ತಾಸೆ ಪಡಿಸುವವರಾಗಿರುವುದಕ್ಕೆ ಯಾವ ಕೆಲವು ಮಾರ್ಗಗಳಿವೆ?

ಯಾವುದೇ ಕೆಲಸದಲ್ಲಿ, ಉದ್ದೇಶದಲ್ಲಿ ಅಥವಾ ಯೋಜನೆಯಲ್ಲಿ ಜನರ ಒಂದು ಸಮೂಹವು ಒಟ್ಟಾಗಿ ಕೆಲಸ ಮಾಡಿದಾಗ ಒಬ್ಬೊಬ್ಬರಾಗಿ ಕೆಲಸ

ಮಾಡುವುದಕ್ಕಿಂತ ಹೆಚ್ಚಿನದನ್ನು ಸಾಧಿಸಬಹುದು. ಸಭೆಯನ್ನು ಯೇಸುವಿನ ದೇಹವೆಂದು ಹೇಳುವ ಚಿತ್ರವನ್ನು ಇದು ನೆನಪಿಗೆ ತರುತ್ತದೆ (ರೋಮ 12:3–6). ಇದರಲ್ಲಿ ನಮ್ಮೆಲ್ಲರಿಗೂ ಭಿನ್ನವಾದ ಆದರೆ ಪೂರಕವಾದ ಜವಾಬ್ದಾರಿಯನ್ನು ಹೊರಿಸುತ್ತದೆ. ನಾವು ಪ್ರತಿಯೊಬ್ಬರು ಏನನ್ನು ಚೆನ್ನಾಗಿ ಮಾಡಬಹುದೋ ಅದನ್ನು ನಾವೆಲ್ಲರೂ ಒಟ್ಟಾಗಿ ಸೇರಿ ಮಾಡುವ ರೀತಿಯಲ್ಲಿ ಪ್ರಭಾವ ಬೀರಿದರೆ ನಮ್ಮ ಜೀವನವು, ಕೆಲಸಗಳು ನಿತ್ಯಕ್ಕೂ ಭಿನ್ನತೆಯನ್ನು ತರುತವೆಯೆಂದು ನಂಬಿಕೆಯಿಂದ ಭರವಸರಾಗಿರಬಹುದು.

ಯಾವುದು ಒಳ್ಳೆಯದೋ ಅದನ್ನು ಮಾಡಬಯಸುವಾಗ ಫಲಿತಾಂಶಗಳು ಮುಖ್ಯವಾಗುತ್ತವೆ. ಫಲಿತಾಂಶಗಳೆಂದರೆ ಜನರು ಮತ್ತು ಅವರ ಜೀವನಗಳ ಕೆಲವು ಸಂದರ್ಭದಲ್ಲಿ ಫಲಿತಾಂಶಗಳು ಏನೇ ಆಗಿದ್ದರೂ, ದೇವರಲ್ಲಿ ಭರವಿಸವಿಡಬೇಕು. ಕೆಲವು ಸಂದರ್ಭದಲ್ಲಿ ಬಡತನ ಪರಿಹರಿಸಲು ಕೆಲಸ ಮಾಡುವಾಗ ಗಾಸಿಯಾದವರನ್ನು ಸಂರಕ್ಷಣೆ ಮಾಡುವಾಗ, ಕುಗ್ಗಿಹೋದವರನ್ನು ಬಿಡಿಸುವಾಗ ದನಿ ಇಲ್ಲದವರ ಪರ ಮಾತಾಡುವಾಗ ಕೇವಲ ಅಲ್ಪ ಪ್ರಗತಿಯನ್ನು ನೋಡುತ್ತೇವೆ. ಆದರೆ ನಾವು ಕೆಲಸ ಮಾಡುವುದು ಬಹಳ ಉನ್ನತವಾದ ಮತ್ತು ಅನಿವಾರ್ಯವಾಗಿ ಗೆಲ್ಲಲೇ ಬೇಕಾದ ಕಾರಣಕ್ಕೆ ಆಗಿರುವಾಗ "ಒಳ್ಳೆಯದನ್ನು ಮಾಡುವುದರಲ್ಲಿ ಬೇಸರಗೊಳ್ಳದೆ ಇರೋಣ ಯಾಕೆಂದರೆ ಮನಗುಂದದಿದ್ದರೆ ತಕ್ಕ ಸಮಯದಲ್ಲಿ ಬೆಳೆಯನ್ನು ಕೊಯ್ಯುವೆವು. ಆದುದರಿಂದ ಸಮಯವಿರಲಾಗಿ ಎಲ್ಲರಿಗೂ ಒಳ್ಳೆಯದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ (ಗಲಾತ್ಯ 6:9,10).

ಇದಲ್ಲದೆ ಪರೋಪಕರವನ್ನು ಧರ್ಮಮಾಡುವುದನ್ನು ಮರೆಯಬೇಡಿರಿ; ಇವೇ ದೇವರಿಗೆ ಸಮರ್ಪಕವಾದ ಯಜ್ಞಗಳು (ಇಬ್ರಿಯ 13:16). ಆದಕಾರಣ ಒಬ್ಬರಿಗೊಬ್ಬರು ಉತ್ತೇಜನ ನೀಡುವುದಕ್ಕೆ ಅಕ್ಷರಶಃ ಒಬ್ಬರಿಗೊಬ್ಬರು ಧೈರ್ಯ ಹುಟ್ಟಿಸಲು ಪ್ರೇರಿಸುವುದಕ್ಕೆ ಕರೆಯಲ್ಪಟ್ಟಿದ್ದೇವೆ. ನಂಬಿಗಸ್ತರಾಗಿ ಜೀವಿಸುವುದು ಆನಂದಕರವಾಗಿಯೂ ಕಷ್ಟಕರವಾಗಿಯೂ ಇರುತ್ತದೆ. ನ್ಯಾಯಪರವಾದ ನಮ್ಮ ದೇವರು ನ್ಯಾಯಪರವಾದ ನಮ್ಮ ಸಮುದಾಯವು ನಮಗೆ ದೊಡ್ಡ ಉತ್ತೇಜನವಾಗಿದೆ ಮತ್ತು ಈ ಸಮುದಾಯಕ್ಕೆ ಸೇರಿಕೊಳ್ಳಲು ಇತರರನ್ನು ಆಹ್ವಾನಿಸುತ್ತೇವೆ.

ಯಾವಾಗಲೂ ಕಷ್ಟಪಡುತ್ತಿರುವವರಿಗೆ ನಿಯಮಿತವಾಗಿ (ಕ್ರಮವಾಗಿ) ಸಹಾಯ ಮಾಡುವಂತವರು ನಮಗೆ ಯಾರು ಗೊತ್ತಿದ್ದಾರೆ? ಆ ವ್ಯಕ್ತಿಯನ್ನು ಇಲ್ಲವೇ ಗುಂಪನ್ನು ಒಳ್ಳೆಯ ಕೆಲಸವನ್ನು ಮಾಡುವಂತೆ ಹೇಗೆ ಪ್ರೋತ್ಸಾಹ ನೀಡುತ್ತೀರಿ?

**ಶುಕ್ರವಾರ** **ಸೆಪ್ಟೆಂಬರ್ 27**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರ A faithful witness ಪುಟ 546–556, Acts of Apostles ಪುಸ್ತಕ. Kindness the Key of Hearts ಪುಟ 81–86, Welfare Ministry ಪುಸ್ತಕ.

ಶಿಷ್ಯರು ಮಾಡಿದ ಕೆಲಸವನ್ನು ನಾವು ಸಹ ಮಾಡಬೇಕು. ಪ್ರತಿಕ್ರೈಸ್ತನೂ ಮಿಷನರಿ (ಧರ್ಮಪ್ರಚಾರ) ಆಗಿರಬೇಕು. ಸಹಾನುಭೂತಿ ಮತ್ತು ಕನಿಕರದಿಂದ ಸಹಾಯಬೇಕಾದವರಿಗೆ ಸಹಾಯ ಮಾಡಬೇಕು. ನಿಸ್ವಾರ್ಥವಾಗಿ ಶ್ರದ್ಧಾ ಪೂರ್ವಕವಾಗಿ ಗೋಳಾಡುವ ಮಾನವತೆಯ ದುಃಖವನ್ನು ಕಡಿಮೆಗೊಳಿಸಲು ಸಹಾಯ ಮಾಡಬೇಕು.

ನಾವು ಹಸಿದವರಿಗೆ ಆಹಾರ ಕೊಡಬೇಕು. ಬೆತ್ತಲೆಯಾದವರಿಗೆ ಹೊದಿಸಬೇಕು, ಕಷ್ಟಪಡುತ್ತಿರುವವರಿಗೆ ಆದರಣೆ ಕೊಡಬೇಕು. ಹತಾಶರಾಗಿರುವವರಿಗೆ ನಾವು ಸೇವೆ ಮಾಡಬೇಕು. ನಿರೀಕ್ಷೆ ಕಳೆದುಕೊಂಡವರಿಗೆ ನಿರೀಕ್ಷೆ ಹುಟ್ಟಿಸಬೇಕು. ಯೇಸುಕ್ರಿಸ್ತನ ಪ್ರೀತಿಯು ನಿಸ್ವಾರ್ಥ ಸೇವೆಯಲ್ಲಿ ವ್ಯಕ್ತವಾಗಿದ್ದು ದುಷ್ಟತನವನ್ನು ನಡೆಸುವವನ ಸುಧಾರಣೆಗೆ ಕತ್ತಿಗಿಂತಲೂ ನ್ಯಾಯಾಲಯಕ್ಕಿಂತಲೂ ಹೆಚ್ಚಿನ ಪರಿಣಾಮಕಾರಿಯಾಗಿದೆ. ಅನೇಕ ವೇಳೆ ನಿಂದನೆಗೆ ಕಠಿಣವಾಗುವ ಹೃದಯವು ಕ್ರಿಸ್ತನ ಪ್ರೀತಿಗೆ ಕರಗಿ ಹೋಗುತ್ತದೆ". ಎಲೆನ್ ಜಿ ವೈಟಮ್ಮನವರ "ದಿ ಮಿನಿಸ್ಟ್ರಿ ಆಫ್ ಹೆವೆನ್ಲಿ, ಪುಟ 104, 106.

ದಾಸತ್ವ, ಜಾತಿ ವ್ಯವಸ್ಥೆ, ಜನಾಂಗೀಯ ಪೂರ್ವಾಗ್ರಹ, ಬಡವರ ಶೋಷಣೆ, ದೌರ್ಭಾಗ್ಯದಲ್ಲಿರುವವರ ಅಲಕ್ಷ್ಯ ಇವೆಲ್ಲಾ ಮಾನವ ಕುಲದ ಒಳಿತಿಗೆ ಅಕ್ರೈಸ್ತೀಯ ಗಂಭೀರವಾದ ಪೀಡೆಯಂತಿವೆ. ಜನರಲ್ ಕಾನ್ಫರೆನ್ಸ್ ಅಧ್ಯಕ್ಷರಾಗಿದ್ದ ಎ.ಜಿ. ಡ್ಯಾನಿಯಲ್ ರವರು ಎಲೆನ್ ಜಿ ವೈಟಮ್ಮನವರ ಶವಸಂಸ್ಕಾರದಲ್ಲಿ ಆಡಿದ ಮಾತುಗಳು "ಲೈಫ್ ಸ್ಕೆಚಸ್ ಆಫ್ ಇ.ಜಿ. ವೈಟ್" ಪುಟ 473.

## ಚರ್ಚಿಸಬೇಕಾದ ಪ್ರಶ್ನೆಗಳು

1. ಈ ಲೋಕದಲ್ಲಿ ಅನೇಕ ಜನರು, ಸಂಘಗಳು, ಸಂಸ್ಥೆಗಳು ಬಡವರ ಉದ್ಧಾರವನ್ನು ಬಯಸುತ್ತವೆ. ಈ ಕೆಲಸವನ್ನು ಮಾಡಲು ವಿಶಿಷ್ಟವಾದ ಯಾವ ಬಲಗಳನ್ನು, ಒಳನೋಟ ಮತ್ತು ಸಂಪನ್ಮೂಲಗಳನ್ನು ಸೆವೆಂತ್ ಡೇ ಅಡ್ವೆಂಟಿಸ್ಟ್ ಸಭೆಯು ಕಾರ್ಯನಿರ್ವಹಿಸುವುದಕ್ಕೆ ತರುತ್ತದೆ?

2. ನೀವು ನಿಮ್ಮ ಸಭೆಯ ಸಮುದಾಯದಿಂದ ಪ್ರೋತ್ಸಾಹ ಹೊಂದಿದ, ಸಹಾಯ ನೀಡಿದ ಸಂದರ್ಭಗಳನ್ನು ನೆನಪು ಮಾಡಿಕೊಳ್ಳುವಿರಾ? ಅನುಭವದಿಂದ ಕಲಿತಿರುವ ನೀವು ಇದೇ ತರವಾದ ಪ್ರೋತ್ಸಾಹವನ್ನು ಇತರರಿಗೆ ಹೇಗೆ ಹರಡುವುದು (ವಿಸ್ತರಿಸುವುದು)?

3. ಸಭೆಯ ಒತ್ತಾಸೆ ಮಾತ್ರವಲ್ಲದೆ ಬೇರೆ ಯಾವ ಒತ್ತಾಸೆಗಳು ನೀವು ಒಳ್ಳೆಯದನು ಮಾಡಿ ಬಸವಳಿಯದಂತೆ ಮಾಡುತ್ತವೆ?

4. ಲೋಕದಾದ್ಯಂತ ಹರಡಿರುವ ಸೆವೆಂತ್ ಡೇ ಅಡ್ವೆಂಟಿಸ್ಟ್ ಸಭೆಯ ಬಡತನ ಮತ್ತು ಅನ್ಯಾಯ ನಿವಾರಣೆಯ ಕೆಲವು ಯೋಜನೆಗಳ ಬಗ್ಗೆ ನಿಮಗೆಷ್ಟು ಅರಿವಿದೆ? ಸಭೆಯ ಈ ವಿಧದ ಯೋಜನೆಗಳಿಗೆ ನೀವು ಏನಾದರೂ ಕೊಡುಗೆಯನ್ನು ಹೇಗೆ ಕೊಡಬಲ್ಲಿರಿ?

**ಸಾರಾಂಶ :** ಹೌದು, ನಾವು ಕ್ರೈಸ್ತರಾಗಿ ಬಡವರಿಗೆ ಅದರಲ್ಲೂ ನೊಂದವರಿಗೆ ಕಷ್ಟದಲ್ಲಿ ಬೆಂದವರಿಗೆ, ಕುಗ್ಗಿ ಹೋದವರಿಗೆ ಸಹಾಯದ ಕರಗಳನ್ನು ಚಾಚುವುದಕ್ಕೆ ಕರೆಯಲ್ಪಟ್ಟಿದ್ದೇವೆ. ಈ ಕ್ಷೇತ್ರದಲ್ಲಿ ನಮಗೆ ವೈಯಕ್ತಿಕವಾಗಿ ಹೆಚ್ಚಿನ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾಗ್ಯೂ ಇತರರ ಸೇವೆಗೆ ತನ್ನ ಗಮನವನ್ನು ಹರಿಸುತ್ತಿರುವ ಸಭೆ ಕುಟುಂಬವನ್ನು ಸೇರಿ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬಹುದು.